<u>ಅಸಲು ದಾವಾ ಸಂಖ್ಯೆ **- 221/18**</u>                **ಪಿ.ಡಬ್ಲ್ಯೂ:-1**

ದಿನಾಂಕಃ **31.01.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನಾನು ಎಂ.ಎ ಬಿ.ಎಡ್ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಾಯಿಯ ಹೆಸರು ಗೌರಮ್ಮ. ವಾದಿ **1** (ಎ) ರಿಂದ (ಡಿ) ಮತ್ತು (ಎಫ್) ನನ್ನ ಅಕ್ಕಂದಿರು ಮತ್ತು ತಮ್ಮ. ನನ್ನ ತಾಯಿ **2021** ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನನ್ನ ತಾಯಿ ಕೊಟ್ಟು ಮತ್ತು ನನ್ನ ತಾಯಿಯೇ ಸಲ್ಲಿಸಿದ್ದಾರೆ. ಪ್ರತಿವಾದಿ **1** ಮತ್ತು **2** ರವರು ನನ್ನ ತಾಯಿಗೆ ಅಣ್ಣತಮ್ಮಂದಿರಾಗಬೇಕು. **2** ನೇ ಪ್ರತಿವಾದಿ **2023** ನೇ ಸಾಲಿನಲ್ಲಿ ನನ್ನ ತಾಯಿ ತೀರಿಕೊಂಡ ನಂತರ ತೀರಿಕೊಂಡಿರುತ್ತಾರೆ. **2** ನೇ ಪ್ರತಿವಾದಿ ತೀರಿಕೊಂಡಿದ್ದು ಪ್ರತಿವಾದಿ **2** (ಎ) ರಿಂದ (ಡಿ) **2** ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು. **3** ನೇ ಪ್ರತಿವಾದಿ ನನ್ನ ತಾಯಿಗೆ ಅಕ್ಕನಾಗಬೇಕು, **4** ಮತ್ತು **5** ನೇ ಪ್ರತಿವಾದಿಗಳು ತಂಗಿಯರಾಗಬೇಕು. ತಿದ್ದುಪಡಿ ವಾದಪತ್ರವನ್ನು ನ್ಯಾಯಾಲಯಕ್ಕೆ ನಾನೇ ಸಲ್ಲಿಸಿದ್ದೇನೆ. ವಾದ ಪತ್ರದ ಪ್ಯಾರ ನಂ. **2** ರಲ್ಲಿ ನಮೂದು ಮಾಡಿರುವ ವಂಶವಳಿಯಲ್ಲಿ ಪ್ರತಿವಾದಿ **3** ರಿಂದ **5** ರವರನ್ನು ನಮೂದು ಮಾಡಿಲ್ಲ ಎಂದರೆ ಸರಿ. ನನ್ನ ತಾಯಿಯ ಮದುವೆಯ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ **3** ರಿಂದ **5** ರವರು ಮದುವೆಯಾಗಿ ಅವರ ಗಂಡನ ಮನೆಯಲ್ಲಿ ಇದ್ದಾರೆ. ಪ್ರತಿವಾದಿ **3** ರಿಂದ **5** ರವರು ಸಹ ವೀರಪ್ಪನ ಮಕ್ಕಳು ಎಂದು ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮೂದು ಮಾಡಬೇಕು ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ನನ್ನ ತಾಯಿಗೆ **1/3** ಭಾಗಂಶ ಕೋರಿ ದಾವೆಯನ್ನು ಸಲ್ಲಿಸಿದ್ದೇನು. ಪ್ರತಿವಾದಿ **3** ರಿಂದ **5** ರವರಿಗೂ ಸಹ ದಾವಾ ಆಸ್ತಿಗಳಲ್ಲಿ ಸಮಾನವಾದ ಭಾಗಂಶದ ಹಕ್ಕು ಇದೆ ಎಂದರೆ ಸರಿ. ನನ್ನ ತಾಯಿಯ ತಂದೆಯ ಹೆಸರು ವೀರಪ್ಪ, ನನ್ನ ತಾಯಿಯ ಅಜ್ಜನ ಹೆಸರು ಮುರುಗಪ್ಪ. ಮುರುಗೇಪ್ಪರವರಿಗೆ ಎಷ್ಟು ಜನ ಮಕ್ಕಳು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಮುರುಗೇಪ್ಪನವರು ಮೃತರಾದ ದಿನಾಂಕ ನನಗೆ ಗೊತ್ತಿಲ್ಲ. **1** ಮತ್ತು **2** ನೇ

ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದಿ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ಸಾಕ್ಷಿಗೆ ವೀರಪ್ಪರವರಿಗೆ ದಾವಾ ಆಸ್ತಿಗಳಲ್ಲಿ ಯಾವ ಯಾವ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು ಮತ್ತು ಪಿತ್ರಾರ್ಜಿತ ಆಸ್ತಿಗಳು ಯಾವ ಯಾವ ಆಸ್ತಿಗಳು ಎಂದರೆ ಸಾಕ್ಷಿಯು ದಾವಾ ಆಸ್ತಿಗಳು ಎಲ್ಲವು ನನ್ನ ಅಜ್ಜ  ವೀರಪ್ಪನ ಪಿತ್ರಾರ್ಜಿತ ಆಸ್ತಿಗಳು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ನಮ್ಮ ಅಜ್ಜ  ವೀರಪ್ಪರವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ.  ಪ್ರತಿವಾದಿಗಳು ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿದ ನಂತರ ದಾವಾ ಆಸ್ತಿಗಳು ನನ್ನ ಅಜ್ಜ ವೀರಪ್ಪರವರಿಗೆ ಹೇಗೆ ಬಂತು ಎಂದು ತಿಳಿದುಕೊಳ್ಳಲು ಪ್ರಯತ್ನನ ಮಾಡಿರುತ್ತೇನೆ. ದಾವಾ ಆಸ್ತಿಗಳು ನನ್ನ ಅಜ್ಜ ವೀರಪ್ಪರವರಿಗೆ  ಅವರ ತಂದೆಯಿಂದ ಬಂದ್ದಂತ ಆಸ್ತಿಗಳಾಗಿರುತ್ತದೆ. ನನ್ನ ಅಜ್ಜ ವೀರಪ್ಪರವರಿಗೆ ಅಣ್ಣ ತಮ್ಮಂದಿರು ಮತ್ತು ಅಕ್ಕತಂಗಿಯರು ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.